# ಕಂದನ ಸ್ವಗತ

ಅಮ್ಮ ನನ್ನ ಮುದ್ದು ಮಾಡೋದು ನೋಡಿದ್ರೆ
ಅಪ್ಪ ನಗ್ತಾನೆ
ಅಪ್ಪ ನನ್ನ ಮುದ್ದು ಮಾಡೋದು ನೋಡಿದ್ರೆ
ಅಮ್ಮ ನಗ್ತಾಳೆ

ಅಪ್ಪಅಮ್ಮನ, ಅಮ್ಮ ಅಪ್ಪನ ಮುದ್ದು
ಮಾಡೋದು ನಾನು ನೋಡುತ್ತಲೆ
ಅಮ್ಮ ಅಪ್ಪನ ಬಿಟ್ಟು ಸರ್ರಂತ
ನನ್ನ ಹತ್ರ ಬರ್ತಾಳೆ

ಮತ್ತೆ 'ಒಳ್ಳೊಳ್ಳಾಯೀ...' ಅಂತ ತೂಗ್ತಾಳೆ
ನಗ್ತಾ ಲೊಚಕ್ಕಂತ ಮುತ್ತು ಕೊಡ್ತಾಳೆ
ಅಪ್ಪ ಮಾತ್ರ ಲೊಚಗುಟ್ತಾನೆ
ನಗದೇ ಬೆನ್ನು ತಿರುಗಿಸಿ ಮಲಗ್ತಾನೆ

ಬಿಟ್ಟಕಣ್ಣುಗಳ ಬಿಟ್ಟಹಾಗೆ
ನೋಡುತಿರುವೆ, ಯಾಕ್ಹಿಂಗೆ?

● **ನಳಿನಿ ಆರ್.**



# ಬೇಗ ಬಾ ಅಮ್ಮಾ

ಅಮ್ಮಮ್ಮಮ್ಮಮ್ಮ ಬೇಗ ಬಾರೆ
ಮಮ್ಮು ಉಣಿಸಿ, ಜೋಳಿಗೆಗೆ ಹಾಕಿ
ಹೋದೆಯಲ್ಲೆ, ತೂಗಲು ಇಲ್ಲಿ ಯಾರೆ?

ನಿನ್ನ ಕೆಲಸ ಮುಗಿಯುವುದ್ಯಾವಾಗ
ನನಗೆ ಲಾಲಿ ಹಾಡುವುದ್ಯಾವಾಗ
ನಿದ್ದೆ ನಾನು ಹೋಗುವುದ್ಯಾವಾಗ

ನನ್ನನು ತೂಗುವ ಹೊತ್ತಿಗೆ
ನಿನ್ನ ಕಣ್ಣು ಹತ್ತುವವು ಮೆತ್ತಗೆ
ಜೋಂಪಿನಲ್ಲೂ ಕೈಸೋಲದೆ ನಿನಗೆ

ನಾ ಬೇಗ ದೊಡ್ಡವನಾಗಿ ಬಿಡುವೆ
ತಾಚಿ ಮಾಡಿ ನಿನ್ನಾಗ ಮಲಗಿಸುವೆ
ಈಗ ನೀ ಬರದಿದ್ದರೆ ನಾ ಅಳುವೆ

● **ನಳಿನಿ ಟಿ. ಭೀಮಪ್ಪ**